

ಬಕಿಂಗ್‌ಹ್ಯಾಮ್ ಪ್ಯಾಲೇಸ್

ಮುಖ ತೊಳೆಯುವ–ಸ್ನಾನ ಮಾಡುವ ಹಾಗೂ ಕುಡಿಯುವ ನೀರಿನ ಮಧ್ಯೆ ಅಂತಹ ವ್ಯತ್ಯಾಸವಿಲ್ಲ. ಎಲ್ಲ ನೀರೂ ಪರಿಶುದ್ಧ. ನಾವು ಪ್ರಯಾಣ ಮಾಡಿದ ಕೇಂಬ್ರಿಡ್ಜ್, ಆಕ್ಸ್‌ಫರ್ಡ್, ವೊಲ್ವರ್ ಹ್ಯಾಮ್ಟನ್, ಬರ್ಮಿಂಗ್‌ಹ್ಯಾಮ್ ನಗರಗಳು ಹಾಗೂ ಅಲ್ಲಿನ ವಿಶ್ವವಿದ್ಯಾಲಯಗಳಲ್ಲೂ ನೀರಿನ ಬಾಟಲ್ ಬಳಸಲಿಲ್ಲ. ನಲ್ಲಿಯ ನೀರನ್ನೇ ಕುಡಿದೆವು. ಅಷ್ಟಕ್ಕೂ ಬಾಟಲ್ ನೀರು ಬೇಕೆಂದರೆ ಒಂದು ಲೀಟರ್‌ಗೆ ಒಂದೂವರೆ ಪೌಂಡ್ (₹180) ತೆರಬೇಕು. ಕುಡಿಯುವ ನೀರಿನ ಬಾಟಲ್ ವ್ಯವಹಾರ ನಮ್ಮಲ್ಲಿ ದೊಡ್ಡ ದಂಧೆಯೇ ಆಗಿರುವ ನೆನಪು ಮಾತ್ರ ಪ್ರಯಾಣದ ಉದ್ದಕ್ಕೂ ಕಾಡಿತು.

## ಮೊಬೈಲ್ ಗೀಳು ಮತ್ತು ಓದುವ ಹುಚ್ಚು

ಇದು ಮೊಬೈಲ್ ಯುಗ. ಚಿಕ್ಕಮಕ್ಕಳಿಂದ ಹಿಡಿದು ವೃದ್ಧರವರೆಗೂ ಮೊಬೈಲ್ ಬಳಸುತ್ತಿದ್ದಾರೆ. ಸಭೆ, ಸಮಾರಂಭ, ಮನೆಗೆ ಅತಿಥಿಗಳು ಬಂದಾಗಲೂ ಪರಸ್ಪರ ನೇರ ಸಂಭಾಷಣೆ ಕಡಿಮೆಯಾಗಿದೆ. ಒಂದು ಕಾರ್ಯಕ್ರಮ, ವಿಚಾರ ಸಂಕಿರಣ, ತರಬೇತಿ, ಬೋಧನಾ ಸಮಯದಲ್ಲೂ ಮೊಬೈಲ್‌ನತ್ತ ಕಣ್ಣು ಹೊರಳುತ್ತಲೇ ಇರುತ್ತದೆ. ಬ್ರಿಟನ್ ಜನರೂ ಮೊಬೈಲ್ ಬಳಸುತ್ತಾರೆ. ತಮ್ಮ ಜತೆ ಇಟ್ಟುಕೊಂಡಿರುತ್ತಾರೆ. ಆದರೆ, ನಮಗೂ ಅವರಿಗೂ ಇರುವ ವ್ಯತ್ಯಾಸ, ಅವರು ಅಗತ್ಯಕ್ಕೆ ತಕ್ಕಂತೆ ಬಳಸುತ್ತಾರೆ, ನಮ್ಮದು ಎಲ್ಲವೂ ಅನಗತ್ಯಕ್ಕೆ ಆದ್ಯತೆ.

ಒಂದು ಕಾಲದಲ್ಲಿ ಬ್ರಿಟನ್‌ನ ಎರಡನೇ ಮ್ಯಾಂಚೆಸ್ಟರ್ ಎಂದೇ ಪ್ರಸಿದ್ಧವಾಗಿದ್ದ ವೊಲ್ವರ್ ಹ್ಯಾಮ್ಟನ್ ನಗರ ಈಗ ಶೈಕ್ಷಣಿಕ ಹಬ್ ಆಗಿ ಬೆಳೆಯುತ್ತಿದೆ. ಕೈಗಾರಿಕೆಗಳ ಕಲುಷಿತ ವಾತಾವರಣ ನೀಗಿ, ಪ್ರಕೃತಿ ಮತ್ತೆ ಮೊದಲಿನಂತೆ ನಲಿಯುತ್ತಿದೆ. ನಗರದ ಹೃದಯ ಭಾಗದಲ್ಲೇ ಇರುವ ವೊಲ್ವರ್ ಹ್ಯಾಮ್ಟನ್ ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳು ಕಳೆದಾಗ ಅಲ್ಲಿನ ಜನರ ಓದಿನ ಹುಚ್ಚು, ಪುಸ್ತಕ ಓದುವ ಹವ್ಯಾಸದ ದರ್ಶನವಾಯಿತು. ಅಲ್ಲಿನ ವಿದ್ಯಾರ್ಥಿಗಳು, ಅಧ್ಯಾಪಕರು, ಜನರ ಕೈಯಲ್ಲಿ ಮೊಬೈಲ್ ನೋಡಿದ್ದೇ ಕಡಿಮೆ. ಸದಾ ಯಾವುದೋ ಒಂದು ವಿಷಯದ ಅಧ್ಯಯನ ಮಾಡುತ್ತಿರುತ್ತಾರೆ. ಇಲ್ಲವೇ ಸಂಶೋಧನೆಯ ಬೆನ್ನು ಹತ್ತಿರುತ್ತಾರೆ.

ನಗರ ವೀಕ್ಷಣೆ ಮುಗಿಸಿಕೊಂಡು ಬರ್ಮಿಂಗ್‌ಹ್ಯಾಮ್‌ಗೆ ಟ್ರಾಮ್ ರೈಲಿನಲ್ಲಿ ಪಯಣಿಸುವಾಗ ನಾವೆಲ್ಲ ಮೊಬೈಲ್‌ನಲ್ಲೇ ಮುಳುಗಿದ್ದರೆ, ಅಲ್ಲಿನ ಬಹುತೇಕ ಸ್ಥಳೀಯರು ಪುಸ್ತಕಗಳನ್ನು ತಿರುವಿ ಹಾಕುತ್ತಿದ್ದರು.

‘ಮೊಬೈಲ್ ಬಳಕೆ ಇಂದಿನ ತಾಂತ್ರಿಕ ಜಗತ್ತಿಗೆ ಅನಿವಾರ್ಯ. ಹಾಗಂತ ಎಷ್ಟು ಅಗತ್ಯವಿದೆಯೋ ಅಷ್ಟೇ ಬಳಸಬೇಕು ಎನ್ನುವ ಅಲಿಖಿತ ನಿಯಮವನ್ನು ಬ್ರಿಟನ್ ಜನರು ಪಾಲಿಸುತ್ತಾ ಬಂದಿದ್ದಾರೆ. ಅಧ್ಯಯನ, ಸಂಶೋಧನೆ ಹಾಗೂ ತಾವು ಮಾಡುವ ಕೆಲಸ ಕಾರ್ಯಗಳಿಗೆ ಮೊದಲ ಆದ್ಯತೆ ನೀಡುತ್ತಾರೆ. ಮೇಲ್ನೋಟಕ್ಕೆ ಪಾಶ್ಚಿಮಾತ್ಯರಿಗೆ ಭಾರತದಂತೆ ಕೌಟುಂಬಿಕ ಭಾವನೆಗಳಿಲ್ಲ ಎನ್ನುವಂತೆ ಕಂಡರೂ ಬ್ರಿಟನ್ ಜನರು ಭಾವಜೀವಿಗಳು. ಹಾಗಾಗಿಯೇ, ಮೊಬೈಲ್‌ಗಳಿಗಿಂತ ಕುಟುಂಬದ ಜತೆಗೆ ಹೆಚ್ಚು ಸಮಯ ಕಳೆಯಲು, ಪುಸ್ತಕಗಳನ್ನು ಓದಲು, ಪ್ರವಾಸಕ್ಕೆ ಒಲವು ತೋರುತ್ತಾರೆ’ ಎಂದು ನಮ್ಮನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿದ್ದ ಭಾರತ ಕಾರ್ಯತಂತ್ರ ಮತ್ತು ಪಾಲುದಾರಿಕೆಗಳ ಸಲಹೆಗಾರರಾದ ಪ್ರೊ. ಸುರೇಶ್ ರೇಣುಕಪ್ಪ, ಪ್ರೊ. ಸುಭಾಷಿಣಿ ಸುರೇಶ್ ದಂಪತಿ ವಿವರಿಸಿದರು.

## ದುಬಾರಿ ಬದುಕು

ಬ್ರಿಟನ್ ಪ್ರಯಾಣದ ವೇಳೆಯಲ್ಲಿ ಮಾಡುತ್ತಿದ್ದ ಖರ್ಚನ್ನು ಅಲ್ಲಿನ ಕರೆನ್ಸಿಯಾದ ಪೌಂಡ್ ಜತೆ ಭಾರತದ ರೂಪಾಯಿಯನ್ನು ಹೋಲಿಕೆ ಮಾಡುತ್ತಿದ್ದುದರಿಂದಲೋ ಏನೋ ನಮಗೆ ಬ್ರಿಟನ್ ಜೀವನ ದುಬಾರಿ ಎನಿಸುತ್ತಿತ್ತು. ಸಾಮಾನ್ಯ ಹೋಟೆಲ್, ಸ್ಟ್ರೀಟ್ ಫುಡ್‌ಗಳಲ್ಲೂ ಒಂದು ಕಾಫಿ ಬೆಲೆ ಮೂರರಿಂದ ನಾಲ್ಕು ಪೌಂಡ್ (ಸುಮಾರು ₹400), ಊಟ, ಉಪಾಹಾರ ಕನಿಷ್ಠ 10ರಿಂದ 15 ಪೌಂಡ್ (₹1200ರಿಂದ ₹1800). ವಸ್ತುಸಂಗ್ರಹಾಲಯ, ಅರಮನೆಗಳ ಪ್ರವೇಶ ಶುಲ್ಕ ಕನಿಷ್ಠ 30ರಿಂದ 40 ಪೌಂಡ್ (₹3500ರಿಂದ ₹4500). ಬಾಡಿಗೆ ಕಾರುಗಳ ದರವೂ ಬಲು ದುಬಾರಿ. ಸಾರ್ವಜನಿಕ ಸಾರಿಗೆಗಳ ದರ ಮಾತ್ರ ಸ್ವಲ್ಪ ಕಡಿಮೆ. ಅಂದರೆ 3ರಿಂದ 5 ಪೌಂಡ್.



ರಾಣಿ ವಿಕ್ಟೋರಿಯಾ ಸ್ಮಾರಕದ ಎದುರಿನ ಪ್ರತಿಮೆ

## ಹೆದ್ದಾರಿ ಬದಿ ವ್ಯಾಪಾರ ನಿಷಿದ್ಧ

ಭಾರತದಲ್ಲಿ ಮಾಮೂಲಿ ರಸ್ತೆ, ಹೆದ್ದಾರಿಗಳ ಬದಿಯ ಇಕ್ಕೆಲಗಳಲ್ಲೂ ಅಂಗಡಿ–ಮುಂಗಟ್ಟು, ವಾಣಿಜ್ಯ ಚಟುವಟಿಕೆಗಳು, ಹೋಟೆಲ್‌ಗಳು ಸಹಜವಾಗಿವೆ. ಎಳನೀರು, ಹಣ್ಣುಹಂಪಲು, ಇತರೆ ಸಾಮಗ್ರಿಗಳ ಮಾರಾಟವನ್ನು ಉದ್ದಕ್ಕೂ ಕಾಣಬಹುದು. ಪ್ರಯಾಣಿಕರು ವಾಹನಗಳನ್ನು ರಸ್ತೆ ಬದಿಯೇ ನಿಲ್ಲಿಸಿ, ಊಟ–ಉಪಚಾರ ಮಾಡಿಕೊಳ್ಳುತ್ತಾರೆ. ಸಾಮಗ್ರಿ ಖರೀದಿಸುತ್ತಾರೆ. ಈ ನಿಲುಗಡೆ ಎನ್ನುವುದು ಕೆಲವೊಮ್ಮೆ ಇತರೆ ವಾಹನಗಳ ಸಂಚಾರಕ್ಕೆ ಎಷ್ಟು ಸಮಸ್ಯೆಯಾಗುತ್ತದೆ ಎನ್ನುವುದನ್ನು ಊಹಿಸಲೂ ಆಗದು. ಹೀಗೆ ನಿಲ್ಲಿಸಿದಾಗ, ನಂತರ ಹೊರಡುವಾಗ ಅಪಘಾತಗಳಾಗಿ ಎಷ್ಟೊ ಜನರು ಪ್ರಾಣ ಕಳೆದುಕೊಂಡಿದ್ದಾರೆ. ಆದರೆ, ಬ್ರಿಟನ್‌ನ ಹೆದ್ದಾರಿಗಳಲ್ಲಿ ಇಂತಹ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ಇಲ್ಲ. ಹೆದ್ದಾರಿಗಳನ್ನು ತೊರೆದು ನಿಗದಿತ ಸ್ಥಳ, ನಿಗದಿತ ಮಾರ್ಗಗಳಲ್ಲಿ ಇರುವ ವ್ಯವಹಾರ ಕೇಂದ್ರಗಳು, ಹೋಟೆಲ್‌ಗಳಿಗೆ ಅಗತ್ಯವಿದ್ದವರು ಹೋಗಬಹುದು. ಮತ್ತೆ ವಾಪಸ್ ಹೆದ್ದಾರಿಗೆ ಬಂದು ಸೇರಲು ಸೇವಾ ರಸ್ತೆಗಳ ಜಾಲವಿದೆ. ಆಯಾ ಪ್ರಕಾರದ ವಾಹನಗಳು ನಿಗದಿತ ಪಥಗಳಲ್ಲೇ ಚಲಿಸುತ್ತವೆ. ಅಲ್ಲಿ ಅವಸರದ ಚಾಲನೆ ಗೌಣ.

ಬರ್ಮಿಂಗ್‌ಹ್ಯಾಮ್‌ನಿಂದ ಲಂಡನ್‌ವರೆಗೆ ಸಾಗುವಾಗ ನಮ್ಮ ಚಾಲಕ ಪಂಜಾಬಿನ ಖುಷಿ ಸಿಂಗ್ ಅವರು ಬಿಸ್ಟರ್ ವಿಲೇಜಿನಲ್ಲಿ ಖರೀದಿಗೆ, ಆಕ್ಸ್‌ಫರ್ಡ್ ನಗರದಲ್ಲಿ ಚಹಾ ಸೇವನೆಗೆ ಅವಕಾಶ ಮಾಡಿಕೊಟ್ಟರು. ರಸ್ತೆಯ ಇಕ್ಕೆಲಗಳಲ್ಲಿ ಚಹಾ ಸೇವನೆಗೂ ಸೌಲಭ್ಯ ಇಲ್ಲ. ಬೆಳಿಗ್ಗೆ 8ಕ್ಕೆ ಸರ್ಕಾರಿ ಕೆಲಸ, ವಾಣಿಜ್ಯ ಚಟುವಟಿಕೆ ಆರಂಭಗೊಂಡು ಸಂಜೆ 4ರಿಂದ 5ಕ್ಕೆ ಮುಕ್ತಾಯ ಮಾಡಲಾಗುತ್ತದೆ. ಬಾರ್, ಪಬ್, ಹೋಟೆಲ್‌ನಂತರ ಚಟುವಟಿಕೆಗಳು ಮಾತ್ರ ತಡ ರಾತ್ರಿಯವರೆಗೂ ಸಾಗುತ್ತವೆ.

ತಾವು ಮಾಡುವ ವೃತ್ತಿ, ಬದುಕನ್ನು ಅದಮ್ಯವಾಗಿ ಪ್ರೀತಿಸುವ, ಸ್ಥಾನಮಾನಗಳನ್ನು ಗೌಣವಾಗಿಸಿ ಪ್ರತಿಯೊಬ್ಬರ ಜೀವವನ್ನೂ ಅಮೂಲ್ಯವೆಂದು ಪರಿಗಣಿಸುವ, ಸಮಯಕ್ಕೆ ಹೆಚ್ಚಿನ ಮಹತ್ವ ನೀಡುವ ಬದುಕಿನ ಕೆಲ ಪಾಠಗಳನ್ನು ಬ್ರಿಟನ್ ಪ್ರವಾಸದ ಉದ್ದಕ್ಕೂ ಕಲಿಸುತ್ತಲೇ ಇತ್ತು.